**ಅರ್ಜಿಯ ಮೇರೆಗೆ ಸಾಕ್ಷಿಯನ್ನು ದಿಃ *25/01/2024* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

***ಮುಂದುವರೆದ ಪಾಟೀ ಸವಾಲು : 1 ನೇ ಪ್ರತಿವಾದಿ ಪರ ವಕೀಲರಿಂದ.***

ನಿ.ಪಿ.23 ರಂತೆ ಇರುವ ಖರೀದಿ ಕರಾರುಪತ್ರವನ್ನು ನಾನು ಸದರಿ ದಾವೆ ಹೂಡುವ ಸಮಯದಲ್ಲಿ ಪ್ರಸ್ತುತ ಪಡಿಸಿಲ್ಲ ಕಾರಣ ಏನೆಂದರೆ ಸದರಿ ಕರಾರುಪತ್ರದ ಮೇಲೆ ಈ ನ್ಯಾಯಾಲಯದಲ್ಲಿ 2019 ನೇ ಇಸ್ವಿಯಲ್ಲಿ ಇನ್ನೊಂದು ದಾವೆ ಚಾಲ್ತಿಯಲ್ಲಿರುವ ಕಾರಣ ನಾನು ಇದನ್ನು ಉದ್ದೇಶಪೂರ್ವಕವಾಗಿ ಹಾಜರುಪಡಿಸಿಲ್ಲ ಎಂದು ಸೂಚಿಸುವ ನಿಮ್ಮ ಸಲಹೆ ಸರಿಯಲ್ಲ. ಸದರಿ ಕರಾರುಪತ್ರ ಮಾಡುವ ಕಾಲಕ್ಕೆ ಪ್ರತಿವಾದಿ ನಂ.1 ಇವರ ಎರಡು ಮನೆಗಳು ಅಲ್ಲಿ ಪ್ರಸ್ತುತವಿದ್ದವು, ಅದನ್ನು ನೋಡಿಯೂ ಸಹ ಖೊಟ್ಟಿಯಾಗಿ ಖರೀದಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಈ ರೀತಿ ಅವರೇ ಕಬ್ಜೆ ವಹಿವಾಟಿನಲ್ಲಿದ್ದಾರೆ ಎಂದು ಗೊತ್ತಿದ್ದರೂ ಸಹ ಅವರನ್ನು ಬಿಡಿಸಬೇಕು ಎನ್ನುವ ಉದ್ದೇಶದಿಂದ ಸದರಿ ಖೊಟ್ಟಿ ಕರಾರುಪತ್ರ ಮಾಡಿಕೊಂಡಿದ್ದೇನೆ ಎಂದು ಸೂಚಿಸುವ ನಿಮ್ಮ ಸಲಹೆ ಸರಿಯಲ್ಲ.

ಖರೀದಿ ಕರಾರುಪತ್ರವು ಸದರಿ ಕರಾರುಪತ್ರದ ಆಸ್ತಿಯ ಮಾಲೀಕರು ಐದು ಜನ ಇದ್ದರು ಸಹ ಒಬ್ಬರೊಂದಿಗೆ ಮಾಡಿಕೊಂಡಿದ್ದೇನೆ ಎಂದರೆ ಸರಿ. ಸಾಕ್ಷಿದಾರರು ಮುಂದುವರೆದು ಸದರಿ ಐದು ಜನ ಮಾಲೀಕರು ಅವರವರ ನಡುವೆ ಒಪ್ಪಂದ ಮಾಡಿಕೊಂಡು ಖರೀದಿ ಕರಾರಿನ ಕಾಲಕ್ಕೆ 1/5 ಅಂಶ ಮಾತ್ರ ಮಾಡಿಕೊಂಡಿದ್ದು ಖರೀದಿ ಪತ್ರದಲ್ಲಿ ಒಪ್ಪಂದದ ಪ್ರಕಾರ ಎಲ್ಲರೂ ಖರೀದಿ ಪತ್ರವನ್ನು ಮಾಡಿಕೊಟ್ಟಿದ್ದಾರೆ ಎಂದು ಉತ್ತರಿಸಿರುತ್ತಾರೆ.

***ಪಾಟೀ ಸವಾಲು : 2, 4 ರಿಂದ 6 ಪ್ರತಿವಾದಿಗಳನ್ನು ಮತ್ತು ಅವರ ಪರ ವಕೀಲರನ್ನು ಕೂಗಿಸಲಾಯಿತು. ಹಾಜರಿರುವುದಿಲ್ಲ ಹಾಗೂ ಯಾರೂ ಪ್ರತಿನಿಧಿಸಿರುವುದಿಲ್ಲ. ನ್ಯಾಯತಾ ದೃಷ್ಟಿಯಿಂದ ಅವರ ಪರ ಪಾಟೀ ಸವಾಲನ್ನು ಮುಂದೂಡಲಾಯಿತು.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,
ಧಾರವಾಡ.